


### ಎಡದಿಂದ ಬಲಕ್ಕೆ

1. ಮನಸ್ಸಮಾಧಾನಕ್ಕಾಗಿ ಮಾಡಿಕೊಂಡದ್ದು ಈ ಒಪ್ಪಂದ 3
3. ಎಂಥ ಅಬ್ಬರ! ಏಕೆಂದರೆ ಅದಿನ್ನೂ ಶುರು 3
4. ಆ ವೃಕ್ಷದ ಸೌಂದರ್ಯವನ್ನು ನೋಡು, ಸೂಕ್ಷ್ಮವಾಗಿ ಗಮನಿಸು 3
6. ವೈಷಮ್ಯವನ್ನು ಹೆಚ್ಚು ಮಾಡಿದ್ದು ಇದೇ ವಸ್ತ್ರ, ಉಡುಪು 3
7. ದುಷ್ಟನಾದವನನ್ನು ಬಂಧಿಸಿಡಲು ಇಂಥ ನಿಬಿಡ ಅರಣ್ಯವೇ ಸರಿ 4
9. ಮುಸುಕಿನಲ್ಲೇ ಓಡಾಡಿದ್ದು ಮೂವತ್ತು ದಿನಗಳ ಸಮಯ 4
11. ಗುರುತಿಲ್ಲದ ಘಟ್ಟ ಪ್ರದೇಶಗಳಲ್ಲಿ ಸುತ್ತಾಟ 4
13. ಕವಿಗಳಿಂದ ಸ್ಫೂರ್ತಿಯನ್ನು ಪಡೆದ ಕುಶಲ ವಿದ್ಯಾ ಪರಿಣಿತ 4
15. ಹಾವಿನ ಹನನದ ಪ್ರಾಯಶ್ಚಿತ್ತಕ್ಕಾಗಿ ಈ ಹೋಮಕಾರ್ಯ 3
17. ಒಲ್ಲೆನೆನ್ನಣ್ಣಾ, ಅದರಲ್ಲಿರುವುದು ಬರೀ ಉಪ್ಪು 3
18. ಕಳಿಸುವುದು ಬೇಡ ಎಂಬುದನ್ನು ಇಲ್ಲಿ ಬರೆದಿಡು 3
19. ತೇರನ್ನೆಳೆವುದಕ್ಕಾಗಿ ರಸ್ತೆಗಳನ್ನೆಲ್ಲ ಖಾಲಿ ಮಾಡಲಾಗಿದೆ 3

### ಮೇಲಿನಿಂದ ಕೆಳಕ್ಕೆ

1. ಅಲ್ಲಿ ಈಗ ಸೇಬು ಸಿಗುವ ಸಾಧ್ಯತೆ ಖಂಡಿತ ಇದೆ 3
2. ನೋವಿನ ಶಮನದ ಈ ಕ್ರಮ ಈಗಿನ್ನೂ ಹೊಸದು 3
3. ಅಷ್ಟು ಅವಸರ ಏಕೆ? ಅದು ಕುದಿಸಿ ಕುದಿಸಿ ತಯಾರಿಸಿದ ಕಷಾಯ 3
5. ತುಂಬ ಹೊಸ ರೀತಿಯಲ್ಲಿದೆ, ಈ ಒಳ್ಳೆಯ ನಗು 3
7. ಪದಾತಿ ದಳಕ್ಕೆ ಈತನೇ ಸೇನಾನಿ 4
8. ತಕಿಟ, ಧಿಕಿಟ ತಾಳಗಳ ಅಭ್ಯಾಸಕ್ಕೆ ಹೊಳೆಯ ತೀರವೇ ಸರಿ 4
9. ಕನಸಿನಲ್ಲಿ ಮಾತನಾಡುವುದೆಂದರೆ ಮನಸ್ಸಿಗೆ ಸಂಬಂಧಿಸಿದ್ದು 4
10. ಪಕ್ಷದ ಎಲ್ಲರಿಗೂ ಬೇಕಾದದ್ದು ಧನ ದೇವತೆಯ ಚರಣ ತಾನೇ? 4
12. ಗೋವುಗಳಿಗೆ ಕಾವಲು ನಿಲ್ಲಲು ಹಳ್ಳಿ ಮನುಷ್ಯನೇ ಸರಿ 3
14. ಮಗುವನ್ನು ಕಾಯ್ದರಷ್ಟೇ ಸಾಲದು; ಲಾಲಿ ಹಾಡಿ ಮುದ್ದು ಕೂಡ ಮಾಡು 3
15. ಹಣವನ್ನು ತೆಗೆವ ಮೊದಲು ಹಚ್ಚಿದ್ದು ಎಣ್ಣೆ ದೀಪ 3
16. ಉಲಿವ ಹಕ್ಕಿಗಳನ್ನು ಕಂಡರೇ ಸಂತಸ ನಿಶ್ಚಿತ 3

### 01–05–2025 ಉತ್ತರಗಳು

**ಎಡದಿಂದ ಬಲಕ್ಕೆ**

1. ನಿರ್ವಚನ 3. ಅದುರು 4. ವಣಿಕ 6. ವಿನಿಮಯ 7. ತ್ರಿಪಿಟಕ 9. ಯಮಲೋಕ 12. ಸದುಪಾಯ 14. ನಧಾವಿ (ವಿಧಾನ ಹಿಂದುಮುಂದು) 15. ಸಕಲ 16. ದಳಪತಿ

**ಮೇಲಿನಿಂದ ಕೆಳಕ್ಕೆ**

1. ನಿರುಪಾಯ 2. ನವರಾತ್ರಿ 3. ಅವನಿ 5. ಕಳ್ಳಾಟ 6. ವಿಷಮಯ 8. ಕಮನೀಯ 10. ಮರ್ದನ 11. ಕಲಾವಿದ 12. ಸರಸತಿ (=ಸರಸ್ವತಿ) 13. ಪಾತಾಲ

ಪ್ರಶ್ನಾಂಕಣ

# ಚಕ್ರವರ್ತಿ: ಏಕೆ ಇಂಥ ಅವನತಿ?

ಚಕ್ರವರ್ತಿ ಪೆಂಗ್ವಿನ್ (Emperor Penguin): ಅದು ಪ್ರಸಿದ್ಧವಾದ ಒಂದು ಕಡಲ ಹಕ್ಕಿ. ಹಾರದ ಹಕ್ಕಿಯೂ ಆಗಿರುವ ಪೆಂಗ್ವಿನ್‌ಗಳಲ್ಲಿ ಪ್ರಸ್ತುತ ಹದಿನೆಂಟು ಪ್ರಭೇದಗಳಿವೆ. ಅವುಗಳಲ್ಲೆಲ್ಲ ಚಕ್ರವರ್ತಿ ಪ್ರಭೇದದ್ದೇ (Aptenodites forsteri) ಅತ್ಯಂತ ದೊಡ್ಡ ಗಾತ್ರ. ವಯಸ್ಕ ಚಕ್ರವರ್ತಿಗಳದು ಒಂದು ಮೀಟರ್‌ಗೂ ಹೆಚ್ಚು ಎತ್ತರ; 35 ಕಿಲೋ ತೂಕ (ಚಿತ್ರ 3ರಲ್ಲಿ ಎಡ ಕೊನೆಯಲ್ಲಿರುವ ಚಕ್ರವರ್ತಿಯನ್ನು ಪೂರ್ವಕಾಲದಲ್ಲಿದ್ದ ಅತ್ಯಂತ ದೈತ್ಯ ಮತ್ತು ಅತ್ಯಂತ ಕುಬ್ಜ ಪೆಂಗ್ವಿನ್ ಪ್ರಭೇದಗಳೊಡನೆ ಹೋಲಿಸಿ ಗಮನಿಸಿ). ಅಂಟಾರ್ಕ್ಟಿಕಾ ಭೂಖಂಡವನ್ನು ಪರಿವರಿಸಿರುವ ದಕ್ಷಿಣ ಮಹಾ ಸಾಗರ ಚಕ್ರವರ್ತಿಗಳ ನೆಲೆ. ಅಲ್ಲಿರುವ ಹೇರಳ ಲಭ್ಯತೆಯ ಮತ್ಸ್ಯಗಳು ಮತ್ತು ಕ್ರಿಲ್‌ಗಳೇ ಅವುಗಳ ಪ್ರಧಾನ ಆಹಾರ, ಆದರೆ ಸಂತಾನವರ್ಧನೆಗೆ ಅವು ಹಿಮಾವೃತ ಅಂಟಾರ್ಕ್ಟಿಕಾ ಭೂಖಂಡದ ಅಂಚಿಗೆ ಸೇರಿದಂತೆ ಮೈದಳೆದು ಹರಡಿ ನಿಂತ ಸಮುದ್ರ ಹಿಮದ (ಸೀ ಐಸ್) ಹಾಸನ್ನೇ ಅವಲಂಬಿಸಿವೆ. ಅಂಟಾರ್ಕ್ಟಿಕಾವನ್ನು ಪರಿವರಿಸಿ ಸುಮಾರು 19 ದಶಲಕ್ಷ ಚದರ ಕಿಲೋಮೀಟರ್ ವಿಸ್ತಾರಕ್ಕೆ ಮೈದಳೆದು ನಿಲ್ಲುವ ಈ ಹಿಮ ಪದರ 2ರಿಂದ 3 ಮೀಟರ್ ದಪ್ಪ ಇರುತ್ತದೆ.

ಪ್ರತಿ ವರ್ಷ ಮಾರ್ಚ್ ಏಪ್ರಿಲ್ ತಿಂಗಳುಗಳಲ್ಲಿ ಎಂಪರರ್ ದಂಪತಿಗಳು ಕಡಲನ್ನು ಬಿಟ್ಟು ಸಮುದ್ರ ಹಿಮದ ಹಾಸನ್ನೇರಿ ಬರುತ್ತವೆ. ಸಮುದ್ರ ಹಿಮದ ಈ ಪದರದ ಮೇಲೆ ಅಲ್ಲಲ್ಲಿ, ಅಲ್ಲಲ್ಲಿ ಕಡಲಂಚಿನಿಂದ 50 ಕಿ.ಮೀ. ಮೀರದಷ್ಟು ದೂರಗಳಲ್ಲಿ ಸಾವಿರಗಟ್ಟಲೆ ಸಂಖ್ಯೆಯ ಚಕ್ರವರ್ತಿ ಪೆಂಗ್ವಿನ್ ಹೆಣ್ಣುಗಂಡು ಜೋಡಿಗಳು ಆಗಮಿಸಿ ಬೇರೆ ಬೇರೆ ವಸಾಹತುಗಳಾಗಿ ನೆಲೆ ನಿಲ್ಲುತ್ತವೆ (ಚಿತ್ರ1, 2 ನೋಡಿ). ಮೇ–ಜೂನ್ ಅವಧಿಯಲ್ಲಿ ಒಂದೊಂದು ಮೊಟ್ಟೆ ಇಟ್ಟು ಕಾವು ಕೊಡುತ್ತವೆ. 65 ದಿನಗಳ ನಂತರ ಮೊಟ್ಟೆಗಳಿಂದ ಮರಿಗಳು ಹೊರಬರುತ್ತವೆ. ಡಿಸೆಂಬರ್ ಜನವರಿಯ ವೇಳೆಗೆ ರೆಕ್ಕೆ ಪುಕ್ಕಗಳು ಬಲಿತು ಎಲ್ಲ ಹಕ್ಕಿಗಳೂ ಕಡಲಿಗೆ ಹಿಂದಿರುಗುತ್ತವೆ. ಸ್ಪಷ್ಟವಾಗಿಯೇ, ಹೀಗೆ ಪ್ರತಿ ವರ್ಷ ಮಾರ್ಚ್‌ನಿಂದ ಮುಂದಿನ ಜನವರಿಯವರೆಗೆ ಚಕ್ರವರ್ತಿಗಳಿಗೆ ಸಮುದ್ರ ಹಿಮದ ಅವಲಂಬನೆ ಅನಿವಾರ್ಯ ಅತ್ಯಗತ್ಯ.




ಚಕ್ರವರ್ತಿಗಳು ಅದೃಷ್ಟವಶಾತ್ ಮನುಷ್ಯರಿಂದ ಯಾವುದೇ ರೀತಿಯ ನೇರ ತೊಂದರೆಗೆ, ಅಪಾಯಕ್ಕೆ ಸಿಲುಕಿಲ್ಲ. ಅವು ಮನುಷ್ಯರ ಬೇಟೆಗೆ ಗುರಿಯಾಗಿಲ್ಲ; ಅವುಗಳ ಆವಾಸ ಮನುಷ್ಯರಿಂದ ಅತಿಕ್ರಮಣಗೊಳ್ಳುತ್ತಿಲ್ಲ, ಅವಕ್ಕೆ ಆಹಾರಕ್ಕೆ ಕಿಂಚಿತ್ತೂ ಕೊರತೆ ಇಲ್ಲ. ಆದರೂ, ಅವು ಪ್ರಸ್ತುತ ಅಳಿಯುವ ಹಾದಿ ಹಿಡಿದಿವೆ. ಭೂ ತಾಪ ಏರಿಕೆಯ ಜಾಗತಿಕ ಮಟ್ಟದ ವಿದ್ಯಮಾನದಿಂದ ಕಡಲಿನಾವಾರದ ತಾಪ ಮಟ್ಟವೂ ಏರುತ್ತಿದೆ. ತತ್ಪರಿಣಾಮವಾಗಿ, ಸಮುದ್ರ ಹಿಮದ ವೈಶಾಲ್ಯ ಕುಗ್ಗುತ್ತಿದೆ; ಅವಧಿಗೆ ಮೊದಲೇ ಕರಗಿ ಕುಸಿಯುತ್ತಿದೆ. ಹಾಗಾಗಿ ಎಂಪರರ್‌ಗಳ ಸಂತಾನ ಕ್ಷೀಣಿಸುತ್ತಿದೆ; ಇಡೀ ಪ್ರಭೇದವೇ ಅವನತಿಯ ಹಾದಿ ಹಿಡಿದಿದೆ!

■ ಎನ್. ವಾಸುದೇವ್